ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್(1)/2024

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದೂ.ಸಂ:080-22200777
E-mail: dte.commissioner@gmail.com

ದಿನಾಂಕ: 17.05.2024

## ಸುತ್ತೋಲೆ

ವಿಷಯ : ಸಿ-20 ಪಠ್ಯಕ್ರಮದ 1/2/3/4/5/6 ನೇ ಸೆಮಿಸ್ಟರ್ ನ CIE (CONTINUOUS INTERNAL EVALUATION) Makeup ಕಿರು ಪರೀಕ್ಷೆಗಳನ್ನು ನಡೆಸುವ ಬಗ್ಗೆ.

ಉಲ್ಲೇಖ : Regulations of Diploma Programme for the Curriculum-2020 ಯ ಕಂಡಿಕೆ 14.2 Makeup Examinations.

*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ 1 ರಿಂದ 5ನೇ ಸೆಮಿಸ್ಟರ್ ಸಿ-20 ಪಠ್ಯಕ್ರಮದಲ್ಲಿ 2020-21, 2021-22, 2022-23 ಹಾಗೂ 2023-24ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡಾ 40 ಕ್ಕಿಂತ ಕಡಿಮೆ CIE ಅಂಕಗಳಿರುವ ವಿದ್ಯಾರ್ಥಿಗಳಿಗೆ CIE ಅಂಕಗಳನ್ನು Improve ಗೊಳಿಸುವ ಸಂಬಂಧ ಸಂಸ್ಥೆಗಳ ಮಟ್ಟದಲ್ಲಿ ಈ ಕೆಳಕಂಡ ವೇಳಾಪಟ್ಟಿಯಂತೆ Makeup ತರಗತಿಗಳನ್ನು ನಡೆಸಿ Makeup CIE ಕಿರು ಪರೀಕ್ಷೆಗಳನ್ನು ಜರುಗಿಸುವುದು.

| ಸೆಮಿಸ್ಟರ್ | Makeup ತರಗತಿಗಳು | Makeup CIE ಕಿರು ಪರೀಕ್ಷೆಗಳು | ಆಂತರಿಕ ಅಂಕಗಳ ಪರಿಶೀಲನೆ & ವೆಬ್ ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡುವುದು |
|---|---|---|---|
| 1,2,3,4 & 5ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ | 03/06/2024 ರಿಂದ 12/06/2024 ರವರೆಗೆ | 14/06/2024 ರಿಂದ 20/06/2024 ರವರೆಗೆ | 20/06/2024 |

6ನೇ ಸೆಮಿಸ್ಟರ್ ನ Internship ಗೆ ಸಂಬಂಧಿಸಿದಂತೆ ಅಗತ್ಯ ಹಾಜರಾತಿಯೊಂದಿಗೆ Log Sheet ಮತ್ತು Internship Certificate ಗಳನ್ನು ಸಲ್ಲಿಸಿದ್ದೂ ಹಾಗೂ Project Work ನಲ್ಲಿ ಹಾಜರಾತಿ ತೃಪ್ತಿಕರವಾಗಿದ್ದೂ, CIE-1 ಅಥವಾ CIE-2 ಅಥವಾ CIE-3 ನಲ್ಲಿ 40%ಗಿಂತ ಕಡಿಮೆ ಅಂಕಗಳು ಬಂದಿದ್ದರೆ ಆಯಾ CIE ಗಳನ್ನು ಮಾತ್ರ ಮೇಲ್ಕಂಡ "Makeup CIE" ಸಮಯದಲ್ಲಿ ಉತ್ತಮಪಡಿಸಿಕೊಳ್ಳಲು ಅವಕಾಶವಿರುತ್ತದೆ ಮತ್ತು Improve ಆಗಿರುವ CIE ಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ವಿದ್ಯಾರ್ಥಿಗಳು ಒದಗಿಸುವುದು ಕಡ್ಡಾಯವಾಗಿರುತ್ತದೆ.

Makeup CIE ಕಿರು ಪರೀಕ್ಷೆಗಳನ್ನು ನಡೆಸಿದ ನಂತರ ದಿನಾಂಕ:22.06.2024 ರೊಳಗೆ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ತಪ್ಪದೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಮುಂದುವರೆದು ಮೇ 2024ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಆಂತರಿಕ ಅಂಕಗಳ ಪರಿವೀಕ್ಷಕರೇ Makeup CIE ಆಂತರಿಕ ಅಂಕಗಳನ್ನು ಪರಿಶೀಲಿಸುವರು. ಪ್ರಯುಕ್ತ BTELinx Web Portal ಮೂಲಕ Makeup CIE ಕಿರು ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನುUpload ಮಾಡಲು ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ.

2023-24ನೇ ಶೈಕ್ಷಣಿಕ ಸಾಲಿನಲ್ಲಿ 1,3 ಮತ್ತು 5ನೇ ಸೆಮಿಸ್ಟರ್ ಗಳಲ್ಲಿ Not Eligible (NE Students) ಆಗಿರುವ ಮತ್ತು ಹಿಂದಿನ ವರ್ಷ Makeup CIE ಕಿರುಪರೀಕ್ಷೆಗಳಲ್ಲಿ ಶೇ.40ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದು ಪುನ: Not Eligible (NE Students) ಆಗಿರುವಂತಹ ವಿದ್ಯಾರ್ಥಿಗಳು ಹಾಲಿ ಜರುಗುತ್ತಿರುವ ಮೇ 2024 ರ SEE ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ ಎಂಬುವುದನ್ನು ಗಮನಿಸುವುದು. ಆದಾಗ್ಯೂ ಯಾವುದೇ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಲ್ಲಿ ಅಂತಹವರ ಫಲಿತಾಂಶವು ಮಾನ್ಯವಾಗುವುದಿಲ್ಲವೆಂದು ತಿಳಿಸಲಾಗಿದೆ ಮತ್ತು ಅಂತಹ ಲೋಪಗಳಿಂದುಂಟಾಗುವ/ಉದ್ಭವವಾಗುವ ಕಾನೂನಾತ್ಮಕ ತೊಂದರೆಗಳಿಗೆ ಸಂಸ್ಥೆಯ ಪ್ರಾಚಾರ್ಯರು/ ಮುಖ್ಯ ಅಧೀಕ್ಷಕರನ್ನೇ ಹೊಣೆಯಾಗಿಸಲಾಗುವುದೆಂದು ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ.

ಪ್ರತಿ: 1. ನಿರ್ದೇಶಕರ ಆಪ್ತಶಾಖೆ 2. ಉಪ ನಿರ್ದೇಶಕರು (ಪರೀಕ್ಷೆ) 3. ಇ-ಆಡಳಿತ ವೆಬ್ ಸೈಟ್ ನಲ್ಲಿ ಪ್ರಕಟಿಸಲು
4. ಗಣಕ ಕೇಂದ್ರ–ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು 5. ಇಎಪಿ ವಿಭಾಗಕ್ಕೆ – ಮಾಹಿತಿಗಾಗಿ
6. ಮೇ 2024ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಆಂತರಿಕ ಅಂಕಗಳ ಪರಿವೀಕ್ಷಕರುಗಳಿಗೆ ಸಂಬಂಧಪಟ್ಟ ಪ್ರಿನ್ಸಿಪಾಲರುಗಳ ಮುಖಾಂತರ- ಅಗತ್ಯ ಕ್ರಮಕ್ಕಾಗಿ